ಶ್ರೀ ಬಿ. ಆರ್. ಪಾಟೀಲ್ .— ಸ್ವಾಮಿ, ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಒಂದು ಕ್ವಿಂಟಾಲ್ ಬೀಜಕ್ಕೆ ಸುಮಾರು 50-90 ರೂಪಾಯಿಗಳ ವ್ಯತ್ಯಾಸ ಇದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ಹೆಚ್ಚು ಲಾಭ ಇಟ್ಟುಕೊಳ್ಳದೆ ಕ್ವಿಂಟಾಲ್ ಮೇಲೆ 5ರಿಂದ 10 ರೂಪಾಯಿಗಳನ್ನು ಹೆಚ್ಚಿಗೆ ಕೊಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ ಇದರಲ್ಲಿ ಕಾಸ್ಟ್ ಆಫ್ ಪ್ರೊಕ್ಯೂರ್‌ಮೆಂಟ್ 1500 ರೂಪಾಯಿಗಳು ಆಗುತ್ತದೆ. ಉಳಿದಂತೆ ಪ್ರೊಸಸಿಂಗ್ ಚಾರ್ಜಸ್ ಗನ್ನಿ ಬ್ಯಾಗ್ ಚಾರ್ಜಸ್ ಆಡಳಿತ ವೆಚ್ಚ, ಸಾಗಾಣಿಕೆ ವೆಚ್ಚ, ಇನ್ನು ಇತರೆ ಖರ್ಚುಗಳೆಲ್ಲಾ ಸೇರಿ ಸುಮಾರು 2600 ರೂಪಾಯಿಗಳು ಆಗುತ್ತದೆ. ಆದರೆ ಅದರಲ್ಲಿ ನಾವು 100 ರೂಪಾಯಿಗಳು ಕಡಿಮೆ ಮಾಡಿ ಒಂದು ಕ್ವಿಂಟಾಲ್‌ಗೆ 2500 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದೇವೆ.

ಶ್ರೀ ಎಂ. ಆರ್. ಪಾಟೀಲ್ . — ಸ್ವಾಮಿ, ಇವತ್ತು ನಮ್ಮ ಕರ್ನಾಟಕ ರಾಜ್ಯದಿಂದ ಎಷ್ಟು ಬೀಜ ಬರುತ್ತದೆ. ಆದೇ ಹೊರಗಡೆಯಿಂದ ಎಷ್ಟು ಬೀಜ ಬರುತ್ತದೆ. ಇದರಲ್ಲಿ ತಾವು ಹೊರಗಡೆ ಎಷ್ಟು ಬೀಜ ಮಾರಾಟ ಮಾಡುತ್ತೀರಿ ? ನಮ್ಮ ರಾಜ್ಯದಲ್ಲಿ ಎಷ್ಟು ಬೀಜ ಮಾರಾಟ ಮಾಡಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶಗಳು ಇವೆಯಾ ?

ಅಧ್ಯಕ್ಷರು .— ಆ ಬಗ್ಗೆ ಈಗ ಹೆಚ್ಚಾಗಿ ವಿವರಣೆ ಕೊಡುವುದಕ್ಕಾಗುವುದಿಲ್ಲ. ಆ ಇಲಾಖೆ ಬಂದಾಗ ತಾವು ಬೇಕಾದರೆ ವಿವರವಾಗಿ ಚರ್ಚೆ ಮಾಡಬಹುದು.

ಶ್ರೀ ಎನ್. ಚಿಕ್ಕೇಗೌಡ .— ಸ್ವಾಮಿ, ಸರ್ಕಾರದವರು ಈ ನಿಗಮವನ್ನು ಸ್ಥಾಪನೆ ಮಾಡಿರುವುದು ರೈತರಿಗೆ ಒಳ್ಳೆಯ ಬೀಜವನ್ನು ಕೊಡಬೇಕು. ಆದರೂ ಕಡಿಮೆ ಬೆಲೆಯಲ್ಲಿ ಅಂದರೆ ನಿಗಮವು ಹೆಚ್ಚು ಲಾಭ ಇಟ್ಟುಕೊಳ್ಳದೆ ಬೀಜಗಳನ್ನು ಒದಗಿಸಿಕೊಡಬೇಕೆಂದು. ಆದರೂ ಕೂಡ ಈ ನಿಗಮದವರು ಹೆಚ್ಚು ಲಾಭ ಬಂದಿದೆಯೆಂದು ಹೇಳಿಕೊಂಡಿದ್ದಾರೆ. ಈ ರೀತಿ ಹೆಚ್ಚು ಲಾಭವಿಟ್ಟುಕೊಂಡು ಮಾರಾಟ ಮಾಡಿದರೆ ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತಾರಾ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ, ಮಾಜಿ ಕೃಷಿ ಮಂತ್ರಿಗಳು ಕೊಟ್ಟಂತಹ ಸಲಹೆ ಬಹಳ ಉತ್ತಮವಾಗಿದೆ. ಅವರು ಕೊಟ್ಟಂತಹ ಸಲಹೆಯನ್ನು ಸರ್ಕಾರ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ.

ವಿಷಯ : ರಾಮದುರ್ಗಕ್ಕೆ ಕುಡಿಯುವ ನೀರಿನ ಒದಗಿಸುವಿಕೆ

ಪ್ರಶ್ನೆ : 184 (474) **ಶ್ರೀ ಎಫ್. ಎ. ಕೊಪ್ಪದ್** (ರಾಮದುರ್ಗ). — ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಗ್ರಾಮಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಮದುರ್ಗ ತಾಲ್ಲೂಕಿನ ಕಡಕೋಳ ಬಟಕುರ್ಕಿ ಹಾಗೂ ಹುಲ್ಲುಂಡ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಿನ ಬಗ್ಗೆ ಅಂದಾಜನ್ನು ತಯಾರಿಸಲಾಗಿದ್ದು ಪ್ರತಿಯೊಂದು ಗ್ರಾಮದ ಬಗ್ಗೆಯೂ ಒಂದು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ನಿಜವೆ ;

ಆ) ಹಾಗಿದ್ದಲ್ಲಿ ಇದುವರೆಗೂ ಕೆಲಸ ಪ್ರಾರಂಭಿಸದೇ ಇರುವುದಕ್ಕೆ ಕಾರಣಗಳೇನು ಮತ್ತು ನೀರಿಲ್ಲದೆ ತೊಂದರೆ ಪಡುತ್ತಿರುವುದರಿಂದ ಕುಡಿಯುವ ನೀರನ್ನು ಲಾರಿಗಳಲ್ಲಿಯಾದರೂ ಸರಬರಾಜು ಮಾಡಲು ಸರಕಾರದವರು ಕ್ರಮ ಕೈಕೊಳ್ಳುವರೇ?

ಉತ್ತರ : ಶ್ರೀ ಅಬ್ದುಲ್ ನಜೀರ್ ಸಾಬ್ : (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅ) ಈ ಮೂರು ಗ್ರಾಮಗಳಿಗೆ ತಲಾ ಒಂದು ಸಾವಿರ ದಂತೆ 1983–84ರ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವುದು ನಿಜ.

1) **ಹುಲ್ಲುಂಡ** :— ಈ ಗ್ರಾಮದಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದಿದ್ದು ಪೈಪ್ ಲೈನನ್ನು ಗ್ರಾಮದವರಿಗೂ ಮುಟ್ಟಿಸಿದ್ದು ಹೆಚ್ಚಿನ ಸಬ್ ಮರ್ಶಿಬಲ್ ಪಂಪನ್ನು ಕೊಡ್ರಿಸಿದ್ದು ಗ್ರಾಮಕ್ಕೆ ನೀರು ಪೂರೈಸಲಾಗುವುದು. ಈ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2) **ಕಟಕೋಳ** :— ಈ ಗ್ರಾಮದ ಜನತಾ ಕಾಲೋನಿಯಲ್ಲಿ ತೆಗೆದ ಕೊಳವೆ ಬಾವಿಯಲ್ಲಿ ಸಬ್ ಮರ್ಶಿಬಲ್ ಪಂಪು ಕೂಡ್ರಿಸಿದ್ದು ಹತ್ತಿರದಲ್ಲಿ ಎರಡು ನೀರಿನ ಕಬ್ಬಿಣ ಟ್ಯಾಂಕುಗಳಿಂದ ನೀರನ್ನು ಪೂರೈಸಲಾಗುತ್ತಿದೆ. ಆದರೆ ಈ ಗ್ರಾಮದ ಜನಸಂಖ್ಯೆಯು ಹೆಚ್ಚಳವಿರುವುದರಿಂದ ನೀರಿನ ಅಭಾವ ತಪ್ಪಿಸಲು ಅಭಿವೃದ್ಧಿ ಯೋಜನೆಯ ಅವಶ್ಯಕತೆ ಇರುತ್ತದೆ. ಈ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

3 **ಬಟಕುರ್ಕಿ** :— ಈ ಯೋಜನೆಯ ಅಂದಾಜು ಮತ್ತು ನಕ್ಷೆ ಪಟ್ಟಿ ತಯಾರಿಕೆಯು ಅಂತಿಮ

ಘಟ್ಟದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಇಂತಹ ಗ್ರಾಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಪ್ರಸ್ತಾಪ ಸರಕಾರದ ಪರಿಶೀಲನೆಯಲ್ಲಿದೆ ಮತ್ತು ಹೆಚ್ಚಿನ ಹಣವು ಬಿಡುಗಡೆಯಾದ ಕೂಡಲೇ, ಈ ಯೋಜನೆಗಳ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಲಾಗುವುದು. ಈ ಗ್ರಾಮಗಳಿಗೆ ಜಿಲ್ಲಾಧಿಕಾರಿಯವರ ಸೂಚನೆಯ ಮೇರೆಗೆ ವಾಹನ ಮತ್ತು ಟ್ಯಾಂಕರ್‌ಗಳಿಂದ ನೀರನ್ನು ಸರಬರಾಜು ಮಾಡಲಾಗುವುದು.

ಶ್ರೀ ಎಫ್. ಎ. ಕೊಪ್ಪದ್ .— ರಾಮದುರ್ಗ ತಾಲ್ಲೂಕಿನ ಕಡಕೋಳ, ಬಟಕುರ್ಕಿ, ಹುಲ್ಲುಂಡ ಗ್ರಾಮಗಳಿಗೆ ಕುಡಿಯುವನೀರು ಇಲ್ಲ. ವಿದ್ಯುಚ್ಛಕ್ತಿ ಇಲ್ಲ, ನೀರು ಸಿಗಬೇಕಾದರೆ ನಮಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮಹತ್ತಿರ ರೊಕ್ಕ ಇಲ್ಲ ಬೇಕಾದ್ದು ಮಾಡಿರಿ ಎಂದು ಹೇಳುತ್ತಾರೆ. ನಮಗೆ ಕುಡಿಯುವ ನೀರು ಸಿಗುವಹಾಗೆ ಮಾಡಬೇಕೆಂದು ಮಾನ್ಯಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ ತಾವು ಒಮ್ಮೆ ನಮ್ಮ ಕಡೆಗೆ ಟೂರ್‌ಹಾಕಿಕೊಂಡು ಬಂದು ನೋಡಬೇಕು. ಕೊಳವೆಬಾವಿ ಹಾಕಿದ್ದೀರಿ, ಅವುಗಳಿಗೆ ಕೈಪಂಪ್ ಹಾಕಿಲ್ಲ. ನಮಗೆ ನೀರು ಸಿಗುವ ಸರಿಯಾದ ವ್ಯವಸ್ಥೆ ಮಾಡಬೇಕು. ಬೇಸಿಗೆಕಾಲ ಬರುತ್ತಿದೆ ಕುಡಿಯುವ ನೀರಿನ ತೊಂದರೆ ಇದೆ. ನಮ್ಮ ಕಡೆಗೆ ಪ್ರವಾಸ ಬಂದು ಮಾನ್ಯ ಮಂತ್ರಿಗಳು ನೋಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್ .— ಮಾನ್ಯ ಸದಸ್ಯರು ಕೊಟ್ಟಿರತಕ್ಕ 1ಸಾವಿರ ರೂಪಾಯಿ ಹಣ ಸಾಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. 1980ರಿಂದ 1983ರವರೆಗೆ ಮಂಜೂರಾದ ಕೊಳವೆ ಬಾವಿಗಳು 2090, ಅದಕ್ಕೆ ಬೇಕಾಗಿರತಕ್ಕ ಹಣ 50ಕೋಟಿ ರೂಪಾಯಿ, ರಾಜ್ಯ ಮತ್ತು ಕೇಂದ್ರ ವಲಯಗಳಿಂದ ನಮಗೆ 8ಕೋಟಿ ರೂಪಾಯಿ ಮಾತ್ರ ಸಿಕ್ಕಿದೆ. ನಮ್ಮಸರ್ಕಾರ 460 ಗ್ರಾಮಗಳಲ್ಲಿ ಆದ್ಯತೆಯ ಮೇಲೆ ಕುಡಿಯುವ ನೀರಿನ ಕೆಲಸವನ್ನು ಮಾಡಿ ಮುಗಿಸಿದೆ. ಬಡ್‌ಜಟ್‌ನಲ್ಲಿ 1ಸಾವಿರ ರೂಪಾಯಿ ಟೋಕನ್‌ಗ್ರಾಂಟ್ ಕೊಟ್ಟರೆ ಈ ವರ್ಷ ಮಾಡುವುದಕ್ಕೆ ಆಗುವುದಿಲ್ಲ. ಮುಂದಿನ ವರ್ಷ ಕುಡಿಯುವ ನೀರಿನ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಕೊಳವೆಬಾವಿಗಳನ್ನು ಹಾಕಿ ಆಲ್ಲಿ ಕೈಪಂಪ್‌ಗಳನ್ನು ಜೋಡಿಸಿಲ್ಲವೆಂದು ಮಾನ್ಯಸದಸ್ಯರು ಹೇಳಿದ್ದಾರೆ. ಎಲ್ಲೆಲ್ಲಿ ಆ ರೀತಿಯಾಗಿದೆ ಎಂಬುದನ್ನು ನನಗೆ ತಿಳಿಸಿದರೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಫ್. ಎ. ಕೊಪ್ಪದ್ .— ನೀವು ಎಷ್ಟೇ ಕೊಳವೆಬಾವಿಗಳನ್ನು ತೋಡಿದರೂ ನೀರು ಸಾಕಾಗುವುದಿಲ್ಲ. ಮೋಟಾರುಪಂಪ್ ಜೋಡಿಸಿದರೂ ನೀರು ಸಾಲದೇ ಇರುವಾಗ ನೀವು ಹೇಗೆ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುತ್ತೀರಿ? ನೀವು ಒಮ್ಮೆ ಸ್ವತಹ ಬಂದು ನೋಡಿ. ನೀವು ಒಂದು ಸಾವಿರ ರೂಪಾಯಿ ರೊಕ್ಕ ಕೊಟ್ಟರೆ ಅದು ಯಾವುದಕ್ಕೂ ಸಾಲುವುದಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್ .— 1ಸಾವಿರ ರೂಪಾಯಿ ಟೋಕನ್‌ಗ್ರಾಂಟ್ ಪ್ರತಿವರ್ಷ ಕೊಡಲಾಗುತ್ತಿದೆ. ಈ ವರ್ಷ ಮಾಡಲಿಕ್ಕೆ ಆಗದಿದ್ದರೂ ಮುಂದಿನ ವರ್ಷ ಅಂದರೆ 1984-85ರಲ್ಲಿ ಆ ಗ್ರಾಮಗಳಿಗೆ ಹೆಚ್ಚಿನ ಹಣ ಒದಗಿಸಿಕೊಂಡು ಹೆಚ್ಚು ಗ್ರಾಂಟ್ ಒದಗಿಸಿಕೊಡುತ್ತೇವೆ.

ಶ್ರೀ ಎಫ್. ಎ. ಕೊಪ್ಪದ್ :—ಸಧ್ಯಕ್ಕೆ ಕುಡಿಯುವುದಕ್ಕೆ ನೀರಿಲ್ಲ, ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಅಬ್ದುಲ್ ನಜೀರ್‌ಸಾಬ್ .— ಜಿಲ್ಲಾಧಿಕಾರಿಗಳು ಟ್ಯಾಂಕರ್‌ಮೂಲಕ ನೀರನ್ನು ಒದಗಿಸ ಬೇಕೆಂದು ಈ ಮೂಲಕ ಕ್ರಮತೆಗೆದುಕೊಂಡು ಆದೇಶ ಕೊಟ್ಟಿದ್ದೇನೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಹೊಸ ಪಶುವೈದ್ಯ ಚಿಕಿತ್ಸಾಲಯಗಳ ಸ್ಥಾಪನೆ

ಪ್ರಶ್ನೆ : 190 (148) ಶ್ರೀ ಕೆ ವಸಂತ ಬಂಗೇರ (ಬೆಳ್ತಂಗಡಿ) .— ಮಾನ್ಯ ಪಶುಸಂಗೋಪನಾ ಹಾಗೂ ತೋಟಗಾರಿಕೆಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) 1979ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನ ಮಡಂತ್ಯಾರು ಮತ್ತು ಹತ್ಯಡ ಎಂಬಲ್ಲಿ ಹೊಸ ಪಶುವೈದ್ಯ ಕೇಂದ್ರಗಳು ಮಂಜೂರಾಗಿದ್ದು ಸ್ಥಳೀಯ ಪಂಚಾಯತ್ ಮತಿಯಿಂದ ಸರಕಾರಕ್ಕೆ ಕಟ್ಟಬೇಕಾಗಿದ್ದ ಹಣ ಕಟ್ಟಿದ್ದರೂ ಸದರಿ ಸ್ಥಳಗಳಲ್ಲಿ ಪಶುವೈದ್ಯ ಕೇಂದ್ರಗಳನ್ನು ಈವರೆಗೂ ಪ್ರಾರಂಭಿಸದಿರಲು ಕಾರಣವೇನು ; ಹಾಗೂ ಯಾವಾಗ ಪ್ರಾರಂಭಿಸಲಾಗುವುದು ;

ಆ) ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಪಶುವೈದ್ಯ ಶಾಲೆಯನ್ನು ಮೇಲ್ದರ್ಜೆಗೆ ಸೇರಿಸಲು 1979 ರಲ್ಲಿ ಮಂಜೂರಾತಿ ದೊರಕಿದ್ದರೂ ಈವರೆಗೂ ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು; ಹಾಗೂ ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ;

ಇ) ಪಶುವೈದ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಅತೀವವಾಗಿದ್ದು ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ;

ಈ) ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಹೈನು ಶಿಕ್ಷಣ ಹೊಂದಿದ ಅಭ್ಯರ್ಥಿಗಳಿಗೆ ಇಲಾಖೆಯಲ್ಲಿ ಅವಕಾಶ ನೀಡುವ ವಿಚಾರದಲ್ಲಿ ಸರಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಉತ್ತರ : ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಪಶುಸಂಗೋಪನೆ ಹಾಗೂ ತೋಟಗಾರಿಕೆ ಸಚಿವರು) .— ಅ) ಸರ್ಕಾರದ 1979ರ ಆದೇಶದಲ್ಲಿ ಸಿಬ್ಬಂದಿಗಳ ನೇಮಕಾತಿ ಮತ್ತು ಆರ್ಥಿಕ